## ನೇರ ಡೆಸ್ಕ್‌ಟಾಪ್‌ಗೆ ನಿಮ್ಮ ನಡೆ

ವಿಂಡೋಸ್ 8 ಸ್ಟಾರ್ಟ್ ಸ್ಕ್ರೀನ್ ನೋಡಿ ನೋಡಿ ತಲೆ ಕೆಟ್ಟು ಹೋಗಿದೆಯಾ? ಹಾಗಾದರೆ ಇದನ್ನು ತಪ್ಪಿಸಿ ನೇರವಾಗಿ ಡೆಸ್ಕ್‌ಟಾಪ್‌ಗೆ ಒಯ್ಯುವ ಹೊಸ ಅಪ್ಲಿಕೇಶನ್ ನಿಮ್ಮ ನೆರವಿಗೆ ಬಂದಿದೆ.

ರೆಟ್ರೊ ಯುಐ ನಿಮ್ಮ ಕಂಪ್ಯೂಟರ್‌ನಲ್ಲಿ ವಿಂಡೋಸ್ 8 ಸ್ಟಾರ್ಟ್ ಸ್ಕ್ರೀನ್ ಬದಲಿಗೆ ಡೆಸ್ಕ್‌ಟಾಪ್ ಅನ್ನು ಮುಂದಿಡುತ್ತದೆ. ಹಾಗಂತ ಸ್ಟಾರ್ಟ್ ಸ್ಕ್ರೀನ್ ಆಯ್ಕೆ ಕೂಡಾ ನಿಮಗಿರುತ್ತದೆ. ಅದೂ ಬೇಡವಾ? ಆಗ ಚಾರ್ಮ್ಸ್ ಬಾರ್, ಹಾಟ್ ಕಾರ್ನರ್ ಹಾಗೂ ವಿಂಡೋಸ್‌ನ ಇತರ 8 ಅಂಶಗಳನ್ನು ಈ ಅಪ್ಲಿಕೇಶನ್ ಮೂಲಕ ತೆಗೆದು ಹಾಕಬಹುದು. ಇದು ಕಂಪೆನಿಗಳಲ್ಲಿರುವ ಬಹು ಸಂಖ್ಯೆಯ ಕಂಪ್ಯೂಟರ್‌ಗಳಿಗೆ ಸೂಕ್ತ.







## ಗೂಗ್ಲ್‌ನಿಂದ ಮತ್ತಷ್ಟು ಅಪ್ಲಿಕೇಶನ್

ಗೂಗ್ಲ್ ಡೆಸ್ಕ್‌ಟಾಪ್ ಹೊಸ ಅಪ್ಲಿಕೇಶನ್‌ಗಳನ್ನು ಬಳಸಲು ಅನುವು ಮಾಡಿಕೊಟ್ಟಿದೆ. ಇವುಗಳೆಂದರೆ ಗೂಗ್ಲ್ ಡೆಸ್ಕ್‌ಟಾಪ್ ಆವೃತ್ತಿ 4, ಗೂಗ್ಲ್ ನೋಟ್‌ಬುಕ್, ಗೂಗ್ಲ್ ಟ್ರೆಂಡ್ಸ್ ಮತ್ತು ಗೂಗ್ಲ್ ಕೊ-ಆಪ್. ಕಂಪ್ಯೂಟರ್‌ನ ಸೈಡ್‌ಬಾರ್ ಬಳಸಿ ಅಂದರೆ ಯಾವುದೇ ಸಾಫ್ಟ್‌ವೇರ್ ಡೌನ್‌ಲೋಡ್ ಮಾಡದೆ ಗೂಗ್ಲ್ ಡೆಸ್ಕ್‌ಟಾಪ್ ಅಪ್ಲಿಕೇಶನ್ ಬಳಸಬಹುದು.

ಉದಾಹರಣೆಗೆ ಹಾಡಿನ ಐಕಾನ್ ಅನ್ನು ಮೀಡಿಯಾ ಪ್ಲೇಯರ್ ಮೇಲೆ ಡ್ರ್ಯಾಗ್ ಮತ್ತು ಡ್ರಾಪ್ ಮಾಡಿ ಆ ಹಾಡನ್ನು ಕೇಳಬಹುದು. ವೆಬ್‌ಸೈಟ್‌ಗಳಿಂದ ಚಿತ್ರ ಹಾಗೂ ಇತರ ಮಾಹಿತಿಯನ್ನು ಎಳೆದು ಗೂಗ್ಲ್ ನೋಟ್‌ಬುಕ್‌ನಲ್ಲಿ ಪೇಸ್ಟ್ ಮಾಡಬಹುದು. ಇದಕ್ಕೆ ಪ್ಲಗ್- ಇನ್ ಹಾಗೂ ಗೂಗ್ಲ್ ಅಕೌಂಟ್ ಅಗತ್ಯ.

## ಫೋಟೊಷಾಪ್ ಪರಿಷ್ಕೃತ ರೂಪ


ಅಡೋಬ್‌ನ ಕ್ರಿಯೇಟಿವ್ ಸ್ಯೂಟ್ 6 ರೆಟಿನಾ ಡಿಸ್‌ಪ್ಲೇಗೆ ಉನ್ನತ ಮಟ್ಟದ ರೆಸೊಲ್ಯೂಷನ್ ನೀಡಲಿದೆ. ರೆಟಿನಾ ಡಿಸ್‌ಪ್ಲೇ ಬೆಂಬಲಿಸಲು ಫೋಟೊಷಾಪ್ ಮತ್ತು ಲೈಟ್‌ರೂಮ್‌ನ ಸಿಎಸ್6 ಆವೃತ್ತಿ ಶೀಘ್ರವೇ ಪರಿಷ್ಕೃತ ರೂಪ ಪಡೆಯಲಿದೆ. ಇದರ ಜೊತೆಗೆ ಡ್ರೀಮ್‌ವೀವರ್, ಇಲ್ಲಸ್ಟ್ರೇಟರ್, ಅಡೋಬ್ ಪ್ರೀಮಿಯರ್ ಪ್ರೊ, ಸ್ಪೀಡ್ ಗ್ರೇಡ್ ಕೂಡಾ ಸುಧಾರಿತ ರೂಪ ತಾಳಲಿವೆ.

ಹಾಗೆಯೇ ಐಪ್ಯಾಡ್‌ಗೆ ವಿನ್ಯಾಸ ಮಾಡಲಾದ ಫೋಟೊಷಾಪ್ ಟಚ್ ಅಪ್ಲಿಕೇಶನ್ ಕೂಡಾ ಈ ಪಟ್ಟಿಯಲ್ಲಿದೆ.




## ಮಾಹಿತಿ ಸಂಗ್ರಹ ಸಾಮರ್ಥ್ಯ ಹೆಚ್ಚಳ

ನಿಮ್ಮ ಬಳಿ 1 ಅಥವಾ 2 ಜಿಬಿ ಮೆಮೊರಿ ಕಾರ್ಡ್ ಮಾತ್ರ ಇದೆಯಾ? ಹಾಗಾದರೆ ಮಾಹಿತಿ ಸಂಗ್ರಹಿಸುವ ಸಾಮರ್ಥ್ಯ ಹೆಚ್ಚಿಸಲು ಒನಾವೊ ಎಕ್ಸ್‌ಟೆಂಡ್ ಅಪ್ಲಿಕೇಶನ್ ನಿಮ್ಮ ನೆರವಿಗೆ ಸಿದ್ಧವಾಗಿದೆ. ಇದರ ವೈಶಿಷ್ಟ್ಯವೆಂದರೆ ಮಾಹಿತಿಯನ್ನು ಸಂರಕ್ಷಿಸುವ ಮುನ್ನ ಸರ್ವರ್ ಬಳಸಿ ಮಾಹಿತಿಯ ಗಾತ್ರವನ್ನೇ ಕುಗ್ಗಿಸುತ್ತದೆ. ಆದರೆ ದೊಡ್ಡ ದೊಡ್ಡ ಫೈಲ್‌ಗಳನ್ನು ಡೌನ್ ಲೋಡ್ ಮಾಡುವಾಗ ವೇಗ ಕಡಿಮೆಯಾಗಬಹುದು. ಹಾಗಾದಾಗ ಈ ಅಪ್ಲಿಕೇಶನ್ ಅನ್ನು ತಾತ್ಕಾಲಿಕವಾಗಿ ತೆಗೆದು ಹಾಕಿ ಅಷ್ಟೆ.




■ ಎಸ್. ತುಂಬೆ